

# ರುದ್ರಾಕ್ಷಿ

## ಸಂಪ್ರದಾಯಕ್ಕೆ ಆಧುನಿಕ ಸ್ಪರ್ಶ

ರುದ್ರಾಕ್ಷಿ ಫ್ಯಾಷನ್ ಲೋಕದಲ್ಲಿ ವಿಜೃಂಭಿಸುತ್ತಿದೆ. ಹಾರ, ಕಿವಿಯೋಲೆ, ಬ್ರೇಸ್ಲೆಟ್, ಉಂಗುರಗಳ ರೂಪದಲ್ಲಿ ಫ್ಯಾಷನ್‌ಪ್ರಿಯರಲ್ಲಿ ಸಂಚಲನ ಮೂಡಿಸುತ್ತಿದೆ. ಬೈರಾಗಿಗಳ ಅಲೌಕಿಕ ಕಂಠೀಹಾರವಾಗಿದ್ದ ರುದ್ರಾಕ್ಷಿ ಲೌಕಿಕ ಲೋಕದ ಫ್ಯಾಷನ್ ಬೆಡಗಿಯರನ್ನು ಅಲಂಕರಿಸಿ ಯುವಕರ ಅಕ್ಷಿಗಳನ್ನು ಸೆಳೆಯುವಂತೆ ಮಾಡಿದೆ.

■ ಆರ್ಕೆ ತೊಗರ್ಸಿ

ಆಭರಣ ಲೋಕದಲ್ಲಿ ಅದೆಷ್ಟು ವೈವಿಧ್ಯ. ವಜ್ರ, ಚಿನ್ನ, ಪ್ಲಾಟಿನಂ ಮುಂತಾದ ಲೋಹಗಳಿಂದ ಮಾಡಿದ ಒಡವೆಗಳು ಫ್ಯಾಷನ್ ಜಗತ್ತಿನಲ್ಲಿ ಮಿಂಚುತ್ತಿದ್ದರೂ ಅದರೊಂದಿಗೆ ವನ್‌ಗ್ರಾಂ ಗೋಲ್ಡ್, ಇಮಿಟೇಷನ್ ಜ್ಯುವೆಲ್ಲರಿ, ಪ್ಲಾಸ್ಟಿಕ್, ರಬ್ಬರ್, ಪಕ್ಷಿಗರಿ.. ಮುಂತಾದವುಗಳಿಂದ ತಯಾರಿಸಿದ ಕೃತಕಾಭರಣಗಳೂ ಫ್ಯಾಷನ್‌ಪ್ರಿಯರ ಮನಗೆಲ್ಲುತ್ತಿದೆ. ಇವೆಲ್ಲದರ ಜತೆಗೆ ಫ್ಯಾಷನ್‌ನೊಂದಿಗೆ ಅಧ್ಯಾತ್ಮವೂ ಥಳುಕು ಹಾಕಿಕೊಂಡು ರುದ್ರಾಕ್ಷಿಯಿಂದ ತಯಾರಿಸಿದ ಆಭರಣ ಇಂದು ಫ್ಯಾಷನ್ ಜಗತ್ತಿನಲ್ಲಿ ಟ್ರೆಂಡ್ ಸೃಷ್ಟಿಸಿದೆ.

ಹಾಗೆಂದು ರುದ್ರಾಕ್ಷಿ ಆಭರಣಗಳು ಫ್ಯಾಷನ್ ಲೋಕದಲ್ಲಿ ಹೊಸದೇನಲ್ಲ. ಅನಾದಿಕಾಲದಿಂದಲೂ ರುದ್ರಾಕ್ಷಿ ಹಾರಗಳನ್ನು ಧರಿಸುತ್ತಲೇ ಬಂದಿದ್ದಾರೆ. ಈ ರುದ್ರಾಕ್ಷಿಯಲ್ಲೇ ಇನ್ನಷ್ಟು ವೈವಿಧ್ಯಮಯ ಆಭರಣಗಳನ್ನು ಫ್ಯಾಷನೆಬಲ್ ಆಗಿ ತಯಾರಿಸಿ ಇತರ ಆಭರಣಗಳೊಂದಿಗೆ ಪೈಪೋಟಿ ನಡೆಸುತ್ತಿದ್ದಾರೆ. ರುದ್ರಾಕ್ಷಿ ಹಾರ, ನೆಕ್ಲೇಸ್, ಬ್ರೇಸ್ಲೆಟ್, ಉಂಗುರ, ಕಿವಿಯೋಲೆ ಅಷ್ಟೇ ಅಲ್ಲದೆ ರುದ್ರಾಕ್ಷಿಯಿಂದಲೇ ತಯಾರಿಸಿದ ಬೈತಲೆಬೊಟ್ಟು, ತೋಳ್ಬಂದಿಗಳೂ ಈಗ ಲಭ್ಯ. ರುದ್ರಾಕ್ಷಿಯಲ್ಲೂ ಬಣ್ಣಬಣ್ಣದವು ಲಭ್ಯವಿರುವ ಕಾರಣ ಫ್ಯಾಷನ್‌ಪ್ರಿಯರಿಗೆ 'ಮಿಕ್ಸ್ ಅಂಡ್ ಮ್ಯಾಚ್' ಮಾಡಿಕೊಳ್ಳಲೂ ಅನುಕೂಲವಾಗಿದೆ.

### ಸಂಪ್ರದಾಯಕ್ಕೆ ಆಧುನಿಕತೆಯ ಸ್ಪರ್ಶ

ರುದ್ರಾಕ್ಷಿ– ಬಿಲ್ವಪತ್ರೆ ಶಿವನ ಉಪಾಸಕರಿಗೆ ಪರಮಾತ್ಮನ ಸ್ವರೂಪಿ. ಅವರ ದೃಷ್ಟಿಯಲ್ಲಿ ರುದ್ರಾಕ್ಷಿ ಎಂದರೆ ಶಿವನ ಕಣ್ಣು ಎಂದೇ ಅರ್ಥ. ಭಕ್ತರ ಮನದಲ್ಲಿ ಅದೇ ಭಾವ ರೂಪುಗೊಳ್ಳುತ್ತದೆ.